
# ಮಾನವಿಕ ಕರ್ಣಾಟಕ

ಸಂಪುಟ ೪೪-೪೫

## ಸಂಯುಕ್ತ ಸಂಚಿಕೆ

೨೦೧೭-೨೦೧೮



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

Scanned by CamScanner

***manavika karnataka*** : A Kannada Quarterly of the University of Mysore, Comprehensive Issue, Edited by Prof. Aravindamalagatti, and Prof. R. Ramakrishna, Published by the Director, Prasaranga, University of Mysore, Manasagangotri, Mysore - 570 006. Pp 305

© ಹಕ್ಕುಗಳನ್ನು ಕಾದಿರಿಸಿದೆ

ಪ್ರಧಾನ ಸಂಪಾದಕರು

**ಕುಲಪತಿಗಳು**

ಸಂಪಾದಕರು

**ಪ್ರೊ. ಮಹದೇವ**

**ಪ್ರೊ. ಎಚ್.ಎಲ್. ಚಂದ್ರಶೇಖರ**

**ಡಾ. ವಿಜಯಕುಮಾರಿ ಎಸ್. ಕರಿಕಲ್**

ಪ್ರಕಾಶಕರು

**ಪ್ರೊ. ಎಂ.ಜಿ. ಮಂಜುನಾಥ**

ನಿರ್ದೇಶಕರು

ಪ್ರಸಾರಾಂಗ

ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಮುದ್ರಕರು

**ಎಸ್. ಸತೀಶ್**

ನಿರ್ದೇಶಕರು

ವಿಶ್ವವಿದ್ಯಾನಿಲಯ ಮುದ್ರಣಾಲಯ

ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

Scanned by CamScanner

# ಸಂಪಾದಕರ ಮಾತು

ಮಾನವಿಕ ಕರ್ನಾಟಕವು ಮಾನವಿಕ ವಿಷಯಗಳಲ್ಲಿ ನಡೆಯುತ್ತಿರುವ ಸಂಶೋಧನ ಲೇಖನಗಳನ್ನು ಒಳಗೊಂಡ ತ್ರೈಮಾಸಿಕವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟಗೊಳ್ಳುವ ಈ ಪತ್ರಿಕೆಗೆ ಬಹುಮಾನ್ಯತೆಯಿದೆ. ವಿಶ್ವವಿದ್ಯಾನಿಲಯದ ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆ ಎನ್ನುವ ಮೂರು ಹೊಣೆಗಳಲ್ಲಿ ವಿಸ್ತರಣೆಯ ಜವಾಬ್ದಾರಿ ಪ್ರಸಾರಾಂಗದ್ದು. ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಸಂಶೋಧನೆಯ ಸಾರವನ್ನು, ಫಲಿತಗಳನ್ನು ಜನರ ಬಳಿಗೆ ಒಯ್ಯುವ ಕೆಲಸ ಪ್ರಸಾರಾಂಗದ್ದು. ಅದು ಈ ತ್ರೈಮಾಸಿಕ ಪತ್ರಿಕೆಗಳ ಮೂಲಕ ಸಾಧ್ಯಗೊಳಿಸುತ್ತದೆ. ಪ್ರಸ್ತುತ ಸಂಶೋಧನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದು ವಿದ್ಯಾರ್ಥಿಗಳ ಸಂಶೋಧನಾ ಶಿಸ್ತು ಮತ್ತು ಸಂಶೋಧನಾ ಬರಹದ 'ರೀತಿ' ಇವುಗಳನ್ನು ರೂಢಿಸಿಕೊಳ್ಳಲು ಇದು ವೇದಿಕೆಯನ್ನು ಕಲ್ಪಿಸಿದೆ. ಅಲ್ಲದೆ ಹೊಸ ಶೋಧಗಳ ಕುರಿತ ಲೇಖನಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ಮಾನವಿಕ ವಿಷಯಗಳಾದ ಭಾಷಾ ವಿಜ್ಞಾನ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಸಮಾಜಕಾರ್ಯ, ಅಭಿವೃದ್ಧಿ ಅಧ್ಯಯನ, ಮಹಿಳಾ ಅಧ್ಯಯನ, ಸಂಗೀತ, ಸಾಹಿತ್ಯ ಮುಂತಾದ ವಿವಿಧ ವಿಷಯಗಳ ಲೇಖನಗಳಿಗೆ ಇಲ್ಲಿ ಅವಕಾಶವಿದೆ.

ಜಾನಪದ ಆಚರಣೆಗಳ ಹಿನ್ನೆಲೆಯಲ್ಲಿರುವ ವೈಜ್ಞಾನಿಕ ಸಂಗತಿಗಳನ್ನು ಗುರುತಿಸುವ ಪ್ರಯತ್ನ ಡಾ. ಕೆ.ಪಿ. ಲಲಿತ ಬರೆದ 'ಕೊಡಗಿನ ಕೆಲವು ಜಾನಪದ ಆಚರಣೆಗಳ ವೈಜ್ಞಾನಿಕ ವಿಶ್ಲೇಷಣೆ' ಎಂಬ ಲೇಖನದಲ್ಲಿದೆ. ಕರಗದ ಉತ್ಸವದ ಹಿಂದಿರುವ ನಂಬಿಕೆಯನ್ನು ಅದರ ಆಚರಣೆಯ ಸ್ವರೂಪವನ್ನು ಟಿ. ಎಲ್. ಜಗದೀಶ ಅವರು ಬರೆದ 'ಮೈಸೂರು ಕರಗ ಉತ್ಸವ: ಒಂದು ಜಾನಪದೀಯ ಅಧ್ಯಯನ' ಎಂಬ ಲೇಖನದಲ್ಲಿ ನಿರೂಪಿಸಿದೆ. ಎನ್. ಮಂಜುನಾಥ ಬರೆದ 'ಕೆಂಗೇರಿಯ ಬಂಡೆಮಠ: ಜಾನಪದೀಯ ಅಧ್ಯಯನ' ಎನ್ನುವ ಲೇಖನದಲ್ಲಿ ಕೆಂಗೇರಿಯಲ್ಲಿರುವ ಬಂಡೆಮಠದ ಚರಿತ್ರೆ ಮತ್ತು ಆಚರಣೆಗಳನ್ನು ಜನಪದರ ನೆಲೆಯಲ್ಲಿ ವಿಶ್ಲೇಷಿಸುತ್ತದೆ.

Scanned by CamScanner

ಮೀನಾಕ್ಷಿಯವರ 'ಒಡ್ಡಕನ್ನಡದ ಸ್ವರಧ್ವನಿಮಾಗಳ ವಿತರಣೆ'ಯು ಕನ್ನಡದ ಒಂದು ಭೇದವಾದ ಒಡ್ಡಕನ್ನಡದಲ್ಲಿ ಸ್ವರಗಳು ಹೇಗೆ ಹರಡಿಕೊಂಡಿವೆ ಎಂಬುದನ್ನು ಪರಿಶೀಲಿಸುತ್ತದೆ. ಈ ಲೇಖನದಲ್ಲಿ ಒಡ್ಡಕನ್ನಡದ ಪದಗಳನ್ನು ಅಂತರರಾಷ್ಟ್ರೀಯ ಧ್ವನಿಮಾ ವಿಧಾನದಲ್ಲಿ ಕೊಟ್ಟಿರುವುದು ಸರಿ ಆದರೆ ಈ ಇದೇ ಒಡ್ಡಕನ್ನಡದ ಪದಗಳನ್ನು ಕನ್ನಡ ಲಿಪಿಕರಿಸಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಮೂಲಪದಗಳ ಸ್ವರೂಪ ತಿಳಿಯದಿರುವುದರಿಂದ ವಿಷಯ ವಿಶದೀಕೃತ ಆಗುವುದಿಲ್ಲ.

ಕನ್ನಡದ ಇನ್ನೊಂದು ಉಪಭಾಷೆಯಾದ ಸೋಲಿಗ ಕನ್ನಡ ಕುರಿತು ಮರಿಸ್ವಾಮಿ ಆರ್. ಅವರು 'ಸೋಲಿಗರ ಭಾಷಾ ಮಿಶ್ರಣ ಪ್ರಕ್ರಿಯೆ' ಎಂಬ ಲೇಖನವನ್ನು ಬರೆದಿದ್ದಾರೆ. ಸೋಲಿಗರ ಭಾಷೆಗೆ ತನ್ನದೇ ಆದ ವೈಶಿಷ್ಟ್ಯವಿದೆ. ಈ ವೈಶಿಷ್ಟ್ಯ ಇತ್ತೀಚಿನ ದಿನಗಳಲ್ಲಿ ಪರಿಸರದಲ್ಲಿ ರೂಢಿಯೊಳಗಿರುವ ಕನ್ನಡದ ಪ್ರಭಾವಕ್ಕೆ ಒಳಗಾಗಿ ಬದಲಾಗುತ್ತಿರುವುದನ್ನು ಈ ಲೇಖನ ಗುರುತಿಸುತ್ತದೆ.

'ಮ್ಯಾಸಬೇಡರು: ಕೆಲವು ಭಾಷಿಕ ವಿಚಾರಗಳು' ಎಂಬುದು ಡಾ. ಸಣ್ಣಪಾಪಯ್ಯ ಅವರ ಲೇಖನ. ಒಂದು ಬುಡಕಟ್ಟು ಸಮುದಾಯ ಇವರು ಬಳಸುವ ಕನ್ನಡ ಪದಗಳು ಶಿಷ್ಟಕನ್ನಡ ಪದಕ್ಕಿಂತ ಭಿನ್ನವಾಗಿರುವ ಪಟ್ಟಿಕೊಟ್ಟಿದ್ದಾರೆ. ಪದಮಧ್ಯ ಬರುವ ಏ, ಆ್ಯ ಆಗುವುದು 'ರ'ಕಾರದ ಮುಂದೆ ಡ ಕಾರ ಬಂದಾಗ ರ ಕಾರಕ್ಕೆ ಳ ಕಾರ ಪರ್ಯಾಯವಾಗಿ ಬರುವುದು ವಿಶಿಷ್ಟ ಲಕ್ಷಣವೆನ್ನುತ್ತಾರೆ. ಆದರೆ ಉತ್ತರ ಕರ್ನಾಟಕದ ತೀರ ಒಳಗಿನ ಗ್ರಾಮೀಣ ಪ್ರದೇಶದ ಜನರ ಆಡುಮಾತುಗಳಲ್ಲಿ ಇದು ಸಹಜವಾಗಿಯೇ ಕಂಡುಬರುತ್ತದೆ. ಮ್+ಅ ಆದಿಯ ಶಿಷ್ಟ ಕನ್ನಡ ಪದಗಳು ಮ್ಯಾಸಬೇಡರಲ್ಲಿ ಮ್+ಒ=ಮೊ–ಆಗಿ ಬದಲಾಗಿರುವುದನ್ನು ಗುರುತಿಸುವುದು ವಿಶೇಷ. ಈ ಬದಲಾವಣೆಯ ಕಾರಣಗಳನ್ನು ಶೋಧಿಸುವ ಅಗತ್ಯವಿದೆ. ಅದಕ್ಕೆ ಇನ್ನಷ್ಟು ದತ್ತಾಂಶ ಸಂಗ್ರಹವಾಗಬೇಕು ಎಂದಿರುವುದು ಮುಂದಿನ ಸಂಶೋಧನೆಗೆ ತೋರು ಬೆರಳಾಗಿದೆ.

ದಲಿತ ಚಳವಳಿ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎರಡು ಲೇಖನಗಳಿವೆ. ಪ್ರಸನ್ನ ಡಿ.ಜೆ. ಯವರು 'ದಲಿತ ಚಳವಳಿ ರೂಪಿಸಿದ ಹಾಸನ ಜಿಲ್ಲೆಯ ಭೂ ಹೋರಾಟಗಳು' ಎಂಬ ಲೇಖನದಲ್ಲಿ ಹಾಸನ ಜಿಲ್ಲೆಯನ್ನು ಕೇಂದ್ರವಾಗಿಸಿಕೊಂಡು ಭೂರಹಿತ ದಲಿತರು ಭೂಮಿಯ ಹಕ್ಕನ್ನು ಪಡೆಯುವ ಹೋರಾಟಕ್ಕೆ ದಲಿತ ಚಳವಳಿ ನೀಡಿದ ಪ್ರೋತ್ಸಾಹವನ್ನು ಚರ್ಚಿಸುತ್ತದೆ.

ಬಿಳಿಗಿರಿ ಎನ್ ಅವರು, 'ತುಮಕೂರು ಜಿಲ್ಲೆಯ ದಲಿತ ಸ್ವಾತಂತ್ರ್ಯ ಹೋರಾಟಗಾರ' ಹೆಚ್.ಎಂ. ಗಂಗಾಧರಯ್ಯ ಎಂಬ ಲೇಖನ ಬರೆದಿದ್ದಾರೆ.

Scanned by CamScanner

ಶಿಕ್ಷಣ ಪ್ರೇಮಿ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಎಂ. ಗಂಗಾಧರಯ್ಯ ಅವರ ಪರಿಚಯವನ್ನು ಇಲ್ಲಿ ನೀಡಿದ್ದಾರೆ. ದಲಿತ ಉದ್ಧಾರಕ್ಕೆ ಶಿಕ್ಷಣವೇ ಮೂಲವೆಂದು ನಂಬಿದ ಅವರು ಶಿಕ್ಷಣ ಪ್ರಸಾರಕ್ಕಾಗಿ ಶಾಲೆ ಕಾಲೇಜು ಆರಂಭಿಸಿದರು ಮತ್ತು ಹಾಸ್ಟೆಲ್‌ಗಳನ್ನು ತೆರೆದು ದಲಿತ ಮಕ್ಕಳಿಗೆ ಶಿಕ್ಷಣ ಸುಲಭ ಲಭ್ಯವಾಗುವಂತೆ ಮಾಡಿದ ವಿಷಯವನ್ನು ಈ ಕಿರು ಲೇಖನ ನಿರೂಪಿಸಿದೆ.

ಚೇತನ ಎಂ.ಜಿ ಅವರ 'ಪಂಚಾಯತ್ ರಾಜ್ ಸಂಸ್ಥೆಗೆ ಮಹಿಳಾ ಪ್ರತಿನಿಧಿಗಳು' ಎಂಬುದು ತಳಮಟ್ಟದ ರಾಜಕೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯ, ಅಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ಪಾತ್ರ ಅವರ ಸಂಖ್ಯೆ ಈ ವಿಚಾರವಾದ ಚರ್ಚೆಯಿದೆ. ಮಹಿಳೆಯರು ಕೇವಲ ನಾಮಕಾವಾಸ್ತೆ ಪ್ರತಿನಿಧಿಗಳಾಗಿದ್ದಾರೆ. ಅಲ್ಲಿಯ ಆಡಳಿತ ಇನ್ನೂ ಪುರುಷರ ಕೈಯ್ಯಲ್ಲಿಯೇ ಇದೆ ಎಂಬ ಕಟುವಾಸ್ತವವನ್ನು ಹೇಳುತ್ತದೆ ಅಲ್ಲದೆ ಮಹಿಳಾ ಪ್ರತಿನಿಧಿಗಳ ಸಾಮರ್ಥ್ಯ ಹೆಚ್ಚಿಸಲು ಇರುವ ತರಬೇತಿ ಇತ್ಯಾದಿಗಳ ವಿವರಗಳನ್ನು ಕೊಡುವ ಮೂಲಕ ಅರಿವು ಮೂಡಿಸುವ ಕೆಲಸ ಮಾಡಿದ್ದಾರೆ.

'ಮೀಸಲಾತಿ ಚರ್ಚೆ ಹಾಗೂ ವಿಮುಕ್ತ ಬುಡಕಟ್ಟುಗಳ ಸಬಲೀಕರಣ' ಎಂಬ ಲೇಖನ ಜಯಶೀಲ ಪಿ.ಎಸ್. ಅವರದು. ಮೀಸಲಾತಿಯ ಅಗತ್ಯ ಅದರ ಮಹತ್ವ, ಹಿಂದುಳಿದ ಬಡ ಸಮುದಾಯವಷ್ಟೇ ಅಲ್ಲ ತಮ್ಮ ನೆಲೆಯನ್ನು ಕಳೆದುಕೊಂಡು ಹೊಸ ಜೀವನಕ್ಕೆ ಒಗ್ಗಿಕೊಳ್ಳಲಾಗದ ಇಬ್ಬಂದಿತನದಲ್ಲಿರುವ ಬುಡಕಟ್ಟು ಸಮುದಾಯಗಳನ್ನು ಪ್ರಧಾನಧಾರೆಗೆ ತರುವಲ್ಲಿ ಮೀಸಲಾತಿಯ ಪಾತ್ರ ಬಹಳ ಮಹತ್ವದ್ದು ಎಂಬುದು ಈ ಲೇಖನದ ಆಶಯ.

'ಎಂ.ಪಿ. ಪ್ರಕಾಶ್‌ರವರ ಜೀವನ ಮತ್ತು ರಾಜಕೀಯ– ಒಂದು ವಿಶ್ಲೇಷಣೆ' ಎಂಬ ಲೇಖನ ಜಗದೀಶ ಬಿ.ಆರ್. ಅವರದು. ಅಪರೂಪದ ರಾಜಕೀಯ ಮುತ್ಸದ್ದಿ ಸಜ್ಜನ ರಾಜಕಾರಣಿ ಎಂ.ಪಿ. ಪ್ರಕಾಶ್ ಅವರನ್ನು ಪರಿಚಯಿಸುತ್ತದೆ.

ವೆಂಕಟೇಶ ಅವರು 'ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಬಲೀಕರಣ' ಎಂಬ ಲೇಖನದಲ್ಲಿ ತಳಮಟ್ಟದ ರಾಜಕೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನ ಭಾಗವಹಿಸುವುದರಿಂದ ಅವರ ಸಬಲೀಕರಣ ಸಾಧ್ಯವೆಂಬುದನ್ನು ಇಲ್ಲಿ ಗುರುತಿಸಿದೆ.

ಇತಿಹಾಸ ಅಧ್ಯಯನಕ್ಕೆ ಸಂಬಂಧಿಸಿದ ಲೇಖನಗಳು ಡಾ. ಅಪ್ಪಾಜಿ ಬರೆದಿರುವ 'ಹುಲಿಯೂರುದುರ್ಗ ತಾಲ್ಲೂಕಿನ ಇತಿಹಾಸ ಮತ್ತು ಸಂಸ್ಕೃತಿ'

Scanned by CamScanner

ಲೇಖನವು ಕಾಡು ಕಣಿವೆಯಿಂದ ಕೂಡಿದ್ದ ಆ ಪ್ರದೇಶವು ನಾಡಾಗಿ ದುರ್ಗವಾಗಿ ಬದಲಾದದ್ದರ ಕತೆಯನ್ನು ನಿರೂಪಿಸಿದೆ. ಅಲ್ಲಿಯ ಶಾಸನಗಳು ಜನಪದ ಸಾಹಿತ್ಯ, ವಾಸ್ತುಕಲೆ ಮುಂತಾದವುಗಳ ಕುರಿತಾದ ಮಾಹಿತಿಯನ್ನು ನೀಡುತ್ತ ಅದಕ್ಕೆ ಪ್ರವಾಸಿ ತಾಣವಾಗಿ ಮಾಡಬಹುದೆಂಬುವ ಆಶಯವನ್ನು ಹೊತ್ತಿದೆ.

'ಚಿತ್ರದುರ್ಗ ಪಾಳೆಯಗಾರರ ಆಡಳಿತ ವ್ಯವಸ್ಥೆ' ಸುರೇಶ ಡಿ.ಓ. ಬರೆದ ಲೇಖನ. ಚಿತ್ರದುರ್ಗದ ನಾಯಕರ ಆಡಳಿತ ವ್ಯವಸ್ಥೆ, ಕಂದಾಯ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಸೈನ್ಯ ವ್ಯವಸ್ಥೆಯನ್ನು ಇಲ್ಲಿ ಪರಿಚಯಿಸಿದ್ದಾರೆ. ಸೈನ್ಯ ವ್ಯವಸ್ಥೆಯ ಬಗ್ಗೆ ಬರೆಯುತ್ತ ಸೈನಿಕರನ್ನು ಎಷ್ಟು ಕಾಳಜಿಯಿಂದ ನೋಡಿಕೊಳ್ಳಲಾಗುತ್ತಿತ್ತು. ಅವರ ಕುಟುಂಬವು ಸುಗಮವಾಗಿ ಬದುಕು ಸಾಗಿಸಲು ಅಗತ್ಯವಾದ ಎಲ್ಲ ಸವಲತ್ತುಗಳನ್ನು ಉದಾರವಾಗಿ ನಾಯಕರು ನೀಡುತ್ತಿದ್ದರು ಎಂಬುದನ್ನು ವಿವರಿಸುತ್ತದೆ.

ಲೀಲಾವತಿಯವರ 'ಶಿವಶರಣೆಯರ ವಚನಗಳಲ್ಲಿ ಸ್ತ್ರೀಯರ ಸ್ಥಾನಮಾನ' ಪಲ್ಲವಿ ಎನ್. ಅವರ 'ವೈದೇಹಿ ಅವರ ಸಾಹಿತ್ಯದಲ್ಲಿನ ವಿಧವಾ ಸ್ತ್ರೀ ಪಾತ್ರಗಳು' ಸ್ತ್ರೀವಾದಿ ನೆಲೆಯ ಲೇಖನಗಳಾಗಿವೆ.

ಸಮಕಾಲೀನ ಸಂಗತಿಗಳಿಗೆ ಸ್ಪಂದಿಸುವ ನೆಲೆಯ ಲೇಖನಗಳಾಗಿ ವೆಂಕಟೇಗೌಡ ಅವರ 'ರೈತರ ಆತ್ಮಹತ್ಯೆಗಳು: ಒಂದು ವಿಶ್ಲೇಷಣೆ' ಮತ್ತು 'ಕನ್ನಡ ಕಥನ ಸಾಹಿತ್ಯದಲ್ಲಿ ಗೋವಿನ ಸಂಕಟ ಮತ್ತು ಕೋಮುವಾದ' ಎಂಬ ಎಂ. ಜಯಶಂಕರ ಅವರ ಲೇಖನಗಳು ಗಮನ ಸೆಳೆಯುತ್ತವೆ.

ಸಂಗೀತದ ಕುರಿತಾಗಿ ಡಾ. ಎಸ್. ಗೀತ ಅವರು ಬರೆದಿರುವ 'ಮುತ್ತುಸ್ವಾಮಿ ದೀಕ್ಷಿತರ ನವಗ್ರಹಕೃತಿಗಳ ವೈಶಿಷ್ಟ್ಯತೆ' ಎಂಬುದು. ಈ ಕೃತಿಯ ವಿಷಯ ಅಲ್ಲಿ ಪ್ರತಿಯೊಂದು ಗ್ರಹವನ್ನು ಸ್ತುತಿಸಲು ಬಳಕೆಯಾಗಿರುವ ರಾಗಗಳು, ಗ್ರಹಗಳ ಬಣ್ಣ ಇತ್ಯಾದಿ ವಿವರಗಳನ್ನು ಒಳಗೊಂಡಿರುವ ಬಗೆಯನ್ನು ಪರಿಚಯಿಸುತ್ತದೆ.

ಪ್ರೊ. ವಿ.ಎನ್. ಶೇಷಗಿರಿರಾವ್ ಅವರ ಲೇಖನ ತತ್ವಶಾಸ್ತ್ರದ ಹಿನ್ನೆಲೆಯದು ರಾಮಾನುಜಾಚಾರ್ಯರ ಸಿದ್ಧಾಂತಗಳನ್ನು ಆಧುನಿಕ ತತ್ವಶಾಸ್ತ್ರಜ್ಞರು ಪರಿಭಾವಿಸಿರುವ ಬಗೆಯನ್ನು ಕುರಿತು ಬರೆದ ಲೇಖನ 'ತಾತ್ವಿಕ ಸಗ್ಗದ ಬೆಳಕನ್ನು ಚೆಲ್ಲಿದ ಶ್ರೀ ವೈಷ್ಣವ ತತ್ವೋಪಾಸಕರು' ಎಂಬುದು.

ಮೈಸೂರನ್ನು ಕೇಂದ್ರೀಕರಿಸಿದಂತೆ ರಚನೆಯಾಗಿರುವ ಲೇಖನಗಳು 'ಮೈಸೂರು ಜಿಲ್ಲೆಯಲ್ಲಿ ಜೈನಧರ್ಮ' ಬಿ. ಬಸವರಾಜು ಅವರ ಲೇಖನ, ಮಧುಸೂದನ್ ಸಿ.ಆರ್. ಅವರ 'ಮೈಸೂರು ಪರಿಸರದ ಪ್ರಾಚೀನ ಶೈವ ದೇವಾಲಯಗಳು', ಎಂ. ಸುಮ ಅವರು ಬರೆದಿರುವ 'ನಂಜನಗೂಡು ದೇವಾಲಯಕ್ಕೆ

Scanned by CamScanner

ಮೈಸೂರು ಒಡೆಯರ ಕೊಡುಗೆ' ಎಂಬುವು ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿವೆ. ಹೇಮಂತ ಬಿ.ಆರ್. ಅವರು ಬರೆದಿರುವ 'ವಿಜಯನಗರ ವಿರೂಪಾಕ್ಷನ ಶಾಸನದ ಕಾಲ ಮರುಪರಿಶೀಲನೆ' ಇದು ಸಂಶೋಧನಾ ದೃಷ್ಟಿಯಿಂದ ರಚಿತವಾಗಿದೆ.

'ಗ್ರಾಮೀಣ ಅಭಿವೃದ್ಧಿಯಲ್ಲಿ ಸ್ಥಳೀಯ ಸರ್ಕಾರಗಳ ಪ್ರಮುಖ ಯೋಜನೆಗಳ ಪಾತ್ರ' ಗೋವಿಂದರಾಜು ಹೆಚ್. ಅವರ ಲೇಖನ ಅಭಿವೃದ್ಧಿಗೆ ಪೂರಕವಾಗಿ ಸ್ಥಳೀಯ ಸರ್ಕಾರಗಳು ಹಮ್ಮಿಕೊಂಡ ಯೋಜನೆಗಳು ವಹಿಸುವ ಪಾತ್ರವೇನು ಎಂಬುದನ್ನು ವಿವರಿಸುತ್ತದೆ.

'ಅಭಿವೃದ್ಧಿ ರಾಜಕಾರಣ ಮತ್ತು ನಿಜಾಮರ ಪೂರ್ವ ಹೈದರಾಬಾದ್-ಕರ್ನಾಟಕದ ರಾಜಕೀಯ ಇತಿಹಾಸದ ವಿಶ್ಲೇಷಣೆ' ಎಂಬ ಲೇಖನ ಸುಧಾಕರ ಎಂ. ಅವರದು. ಹಿಂದುಳಿದ ಪ್ರದೇಶದ ರಾಜಕೀಯ ಇತಿಹಾಸವನ್ನು ಕಟ್ಟಿಕೊಡುತ್ತದೆ.

'ಅಗಸರ ನ್ಯಾಯ ಪಂಚಾಯತಿ ವ್ಯವಸ್ಥೆ' ಎಂಬ ಲೇಖನ ಪ್ರೇಮಕುಮಾರ ಅವರದು ಜನಾಂಗದ ಕಟ್ಟುಪಾಡುಗಳು ಆಚಾರ-ವಿಚಾರ, ರೀತಿ-ನೀತಿ, ನಂಬಿಕೆ, ಸಂಪ್ರದಾಯ ಮೊದಲಾದ ಅಂಶಗಳನ್ನು ವಿವರಿಸಿದ್ದಾರೆ.

'ಕಲ್ಲುಕರಗುವ ಸಮಯ ಕಥೆಯಲ್ಲಿನ ಬಂಡಾಯದ ನೆಲೆಗಳು' ಎಂಬ ಲೇಖನ ನಂದೀಶ ಜಿ.ಎಂ. ಅವರು ಕಲ್ಲು ಕರಗುವ ಸಮಯ ಒಂದು ಗ್ರಾಮ ಪರಿಸರದಲ್ಲಿ ಏರ್ಪಡುವಂತಹ ಸಂಘರ್ಷ ಘಟನೆಗಳು ಹಾಗೂ ಜಾತಿಯ ಸಂಕೋಲೆಗಳ ಬಗ್ಗೆ ವಿವರಿಸಿಕೊಟ್ಟಿದ್ದಾರೆ.

ಸೀತಾರಾಮ ಜಾಗೀರ್‌ದಾರ್ ಅವರ ಲೇಖನ 'ಕಾವೇರೀ ನೀರು ನೀರಾವರಿ-ಎಲ್ಲರ ಸ್ವತ್ತು' ಎಂಬ ಶೀರ್ಷಿಕೆಯಡಿಯಲ್ಲಿ ಕಾವೇರಿ ನದಿಯಯ ಬಗ್ಗೆ ಹಾಗೂ ಅಲ್ಲಿರುವ ಶಾಸನಗಳನ್ನು ಬಿಡಿಬಿಡಿಯಾಗಿ ತಿಳಿಸಿಕೊಟ್ಟಿದ್ದಾರೆ.

'ಡಾ. ಚಿಕ್ಕಣ್ಣ ಯಣ್ಣೆಕಟ್ಟೆ : ಚಿತ್ರದೇವರ ಕಾವ್ಯ' ಎಂಬ ಲೇಖನ ಚಿತ್ರಲಿಂಗಯ್ಯರವರದು. ಡಾ. ಚಿಕ್ಕಣ್ಣ ಯಣ್ಣೆಕಟ್ಟೆಯವರು ಸಂಪಾದನೆ ಮಾಡುವ ಮೂಲಕ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅಪೂರ್ವವಾದ ಕೊಡಗೆಯನ್ನು ನೀಡಿರುವ ಬಗ್ಗೆ ಗೊತ್ತುಪಡಿಸಿದ್ದಾರೆ.

ಪ್ರೊ. ಎಂ.ವೈ. ಶಿವರಾಮು ರವರ ಲೇಖನ 'ಮಂಡ್ಯ ತಾಲ್ಲೂಕಿನ ಸ್ಥಳನಾಮಗಳ ಸಾಂಸ್ಕೃತಿಕ ವಿಶ್ಲೇಷಣೆ' ಎಂಬ ಲೇಖನದಲ್ಲಿ ಎಲ್ಲವನ್ನೂ, ಎಲ್ಲರನ್ನೂ

Scanned by CamScanner

ಗುರುತಿಸುವುದು ಹೆಸರಿನಿಂದಲೇ. ಹೆಸರಿಲ್ಲದ ಯಾವುದೇ ಸ್ಥಳ, ವಸ್ತು, ನದಿ, ಬೆಟ್ಟ, ಕಾಡು, ನಾಡು ಯಾವೂದೂ ಇಲ್ಲ. ಎಲ್ಲವೂ ಹೆಸರಿಸುವಂತಹವೇ ಎಂಬುದನ್ನು ಅಚ್ಚುಕಟ್ಟಾಗಿ ವಿವರಿಸಿಕೊಟ್ಟಿದ್ದಾರೆ.

ಪ್ರಭುಸ್ವಾಮಿ ಎ.ಎಂ. ರವರ ಲೇಖನ ಹನೂರು ಕೃಷ್ಣಮೂರ್ತಿ ಅವರ 'ಕತ್ತಲಲ್ಲಿ ಕಂಡ ಮುಖ' ಕಥಾ ಸಂಕಲದ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

ಒಟ್ಟಿನಲ್ಲಿ ಈ ಸಂಚಿಕೆ ಅಭ್ಯಾಸಪೂರ್ಣವಾದ ಲೇಖನಗಳನ್ನು ಒಳಗೊಂಡಿದ್ದು ಓದುಗರಿಗೆ ಉಪಯುಕ್ತವಾದ ಮಾಹಿತಿಗಳನ್ನು ಒದಗಿಸಿಕೊಡುವುದರಲ್ಲಿ ಸಂದೇಹವಿಲ್ಲ.

**ಸಂಪಾದಕರು**

ಪ್ರೊ. ಮಹದೇವ

ಪ್ರೊ. ಎಚ್.ಎಲ್. ಚಂದ್ರಶೇಖರ್

ಡಾ. ವಿಜಯಕುಮಾರಿ ಎಸ್. ಕರಿಕಲ್

Scanned by CamScanner